Reg. No. | | | | | | | | | |

# BCMKALN 101

**I Semester B.Com. Examination, February/March 2023**
**(NEP–2020) (2021-22 Batch Onwards)**
**KANNADA (AECC)**

Time : 2 Hours Max. Marks : 60

I. ಕೆಳಗಿನ **ಮೂರು** ಪ್ರಶ್ನೆಗಳಿಗೆ ಉತ್ತರಿಸುವುದು. **(3×8=24)**

1) ಕರ್ಣನು ಪಾಂಡವರ ಪಕ್ಷ ಸೇರುವಂತೆ ಕೃಷ್ಣ ಆಮಿಷವೊಡ್ಡಿದ ಪ್ರಸಂಗವನ್ನು ಕುರಿತು ವಿವರಿಸಿ.

**ಅಥವಾ**

ಭಾರತದಲ್ಲಿ ಸಾಮಾಜಿಕ, ಧಾರ್ಮಿಕ ಅಸಮಾನತೆಗಳು ಇಲ್ಲವಾಗಿಸಬೇಕೆಂಬ ಆಶಯ ವ್ಯಕ್ತವಾದ ಬಗೆಯನ್ನು ''ಹೊಸ ಹಾಡು'' ಕವಿತೆಯ ಹಿನ್ನೆಲೆಯಲ್ಲಿ ಚಿತ್ರಿಸಿರಿ.

2) ಆಧುನಿಕ ನಾಗರಿಕ ಸಮಾಜ – ಬುಡಕಟ್ಟು ಸಮುದಾಯಗಳ ನಡುವಿನ ಸಂಘರ್ಷವನ್ನು 'ನಾಗರೀಕತೆ ಬರೆದ ಜರವಾ' ಲೇಖನದ ಹಿನ್ನೆಲೆಯಲ್ಲಿ ಚರ್ಚಿಸಿ.

**ಅಥವಾ**

ಜ್ಞಾನ ಸಮಾಜದ ವಿವಿಧ ಆಯಾಮಗಳನ್ನು ವಿವರವಾಗಿ ನಿರೂಪಿಸಿರಿ.

3) ಸಾಮಾಜಿಕ ಅಸಮಾನತೆಯ ನೀತಿಯು 'ಏಕಲವ್ಯ' ನಾಟಕದಲ್ಲಿ ನಿರೂಪಿತಗೊಂಡ ಬಗೆಯನ್ನು ವಿವರಿಸಿ.

**ಅಥವಾ**

ದ್ರೋಣರು ಏಕಲವ್ಯನಿಂದ ಗುರುಕಾಣಿಕೆ ಪಡೆಯಲು ಕಾರಣವೇನು ? ಅದರ ಹಿನ್ನೆಲೆಯನ್ನು ಕುರಿತು ಬರೆಯಿರಿ.

II. ಕೆಳಗಿನ **ಮೂರು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. **(3×5=15)**

1) ಬಸವಣ್ಣನವರ ಸಾಮಾಜಿಕ ಚಿಂತನೆಯ ವಚನಗಳನ್ನು ಕುರಿತು ಚರ್ಚಿಸಿರಿ.

**ಅಥವಾ**

ಜಾಗತೀಕರಣವು ಭಾರತೀಯ ಸಮಾಜದ ಮೇಲೆ ಉಂಟು ಮಾಡಿದ ಪರಿಣಾಮವನ್ನು 'ಸಾಫ್ಟ್‌ವೇರ್ ಮತ್ತು ಎಮ್ಮೆ' ಪದ್ಯದ ಹಿನ್ನೆಲೆಯಲ್ಲಿ ನಿರೂಪಿಸಿ.

P.T.O.

2) ಆನ್‌ಲೈನ್ ಖರೀದಿಯಲ್ಲಿ ಇರಬೇಕಾದ ಎಚ್ಚರಿಕೆಗಳೇನು ? ವಿವರವಾಗಿ ಚರ್ಚಿಸಿ.

**ಅಥವಾ**

ಸೂರ್ಯನ ಸಂಕಥನವನ್ನು ವಿವೇಕ ರೈರವರು ಹೇಗೆ ನಿರೂಪಿಸಿದ್ದಾರೆ ?

3) ದ್ರೋಣಾಚಾರ್ಯರು ಏಕಲವ್ಯನಿಗೆ ಬಿಲ್ವಿದ್ಯೆಯನ್ನು ನಿರಾಕರಿಸಲು ಕಾರಣವೇನು ? ತಿಳಿಸಿ.

**ಅಥವಾ**

ಅಶ್ವತ್ಥಾಮನು ಏಕಲವ್ಯನಿಗೆ ಮಾಡಿದ ಉಪಕಾರವನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿ.

III. ಕೆಳಗಿನ ಒಂದು ಪದ್ಯದ ಸಂದರ್ಭ ಸೂಚಿಸಿ, ಅರ್ಥ ಸ್ವಾರಸ್ಯವನ್ನು ಬರೆಯಿರಿ. **(1×5=5)**

ಚಲಮುಂ ಚಾಗಮುಮಳವುಂ
ಕಲಿತನಮುಂ ಕುಲಮುಮೀಗಳೆನ್ನಯ ಮೆಯ್ಯೊಳ್
ನೆಲೆಸಿದುವು ನಿಮ್ಮ ಕರುಣಾ
ಬಲದಿಂ ನೀವೆನ್ನನಿಂದು ಮಗನೆಂದುದಱಂ

**ಅಥವಾ**

ವ್ಯಾಧನೊಂದು ಮೊಲನ ತಂದರೆ
ಸಲುವ ಹಾಗಕ್ಕೆ ಒಲಿವರಯ್ಯಾ
ನೆಲನಾಳ್ದನ ಹೆಣನೆಂದರೆ
ಒಂದಡಕೆಗೆ ಕೊಂಬರಿಲ್ಲ ನೋಡಯ್ಯಾ

IV. ಈ ಕೆಳಗಿನ ಎರಡು ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **(2×4=8)**

1) ಪಾವಟಿಸುವೆನೊಯ್ಯನೆ ಮುಳ್ಳೊಳೆ ಮುಳ್ಳನ್
2) ಪರಸ್ತ್ರೀ ಪರಧನವೆಂಬ ಜೂಜಿಂಗಂಜುವೆ
3) ಅಳುವ ಕೂಸಿಗೆ ಹಾಲು ಕುಡಿಸಬೇಕು, ತುಪ್ಪ ಕುಡಿಸುವುದಲ್ಲ
4) ಅವನನ್ನು ಹುಡುಕುತ್ತೇವೆ ಗಂಡನಿಗೆ ಮಾತ್ರ ಅದರ ಸುಳಿವು ಸಿಗದಂತೆ ನಟಿಸುತ್ತೇವೆ.

V. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ. **(8×1=8)**

1) ಜರವಾ ಬುಡಕಟ್ಟು ಜನಾಂಗವು ಯಾವ ಆಫ್ರಿಕನ್ ಜನಾಂಗಕ್ಕೆ ಸೇರಿದೆ ?

2) 'ಹುಲಿಯಾಗಿ ಹೋಗಿ ಹೆಬ್ಬುಲಿಯಾಗಿ ಬಾ' ಎಂದು ಏಕಲವ್ಯನನ್ನು ಹರಸಿದವರು ಯಾರು ?

3) 'ಕರ್ನಾಟಕದ ಗ್ರಾಮದೇವತೆ'ಗಳು – ಯಾರ ಸಂಶೋಧನಾ ಗ್ರಂಥ ?

4) ಎ. ಪಿ. ಜೆ. ಅಬ್ದುಲ್ ಕಲಾಂ ಅವರ ಆತ್ಮಕಥನದ ಹೆಸರೇನು ?

5) 'ಮಿರ್ಚಿಮಸಾಲ' ಅಂಕಣ ಬರಹಗಾರರು ಯಾರು ?

6) 'ಸಂಸಾರ ಸಾರೋದಯ' ಎಂಬುದು ಯಾವ ಕವಿಯ ಬಿರುದಾಗಿತ್ತು ?

7) ಸತ್ಯಶರಣೆ ಸಂಕಮ್ಮನ ಗಂಡನ ಹೆಸರೇನು ?

8) ಬಸವಣ್ಣನು ಯಾವ ರಾಜನ ಬಳಿ ಕರಣಿಕ ವೃತ್ತಿಯನ್ನು ಮಾಡುತ್ತಿದ್ದರು ?

Reg. No. | | | | | | | | | |

**BCMKALN 102**

## I Semester B.Com. Degree Examination, February/March 2023
## (NEP 2020) (2022 – 23 Batch Onwards)
## KANNADA
### ಕನ್ನಡ ಭಾಷಾ ಪತ್ರಿಕೆ – I (AECC)

Time : 2 Hours Max. Marks : 60

I. ಕೆಳಗಿನ ಮೂರು ಪ್ರಶ್ನೆಗಳಿಗೆ ಉತ್ತರಿಸಿ : **(3×8=24)**

1) 'ನನ್ನ ಅವತಾರ ' ಕವನವನ್ನು ಜಾಗತೀಕರಣದ ನೆಲೆಗಟ್ಟಿನಲ್ಲಿ ಚರ್ಚಿಸಿರಿ.

**ಅಥವಾ**

ಅಜ್ಜಿ ಮನೆಯ ವಿಳಾಸ ಪತ್ತೆಗಾಗಿ ನಿರೂಪಕಿ ಪಟ್ಟ ಶ್ರಮವನ್ನು ನಿರೂಪಿಸಿರಿ.

2) 'ಹಕ್ಕಿ ಮತ್ತು ಅವಳು' ಕಥೆಯಲ್ಲಿ ಹೆಣ್ಣೊಬ್ಬಳ ಅಂತರಂಗದ ಬಯಕೆ ಹಕ್ಕಿಯ ಜೊತೆಗೆ ಬಹಿರಂಗವಾಗುವ ಸನ್ನಿವೇಶವನ್ನು ವಿವರಿಸಿರಿ.

**ಅಥವಾ**

ಮಹಿಳಾ ಸಾಹಿತ್ಯವನ್ನು ವಿಶ್ಲೇಷಿಸಿರಿ.

3) ಅಸ್ಸಾಂನ ಪ್ರಾಕೃತಿಕ ಸೊಬಗನ್ನು ನಾರಾಯಣ ಶೇವಿರೆಯವರ ಅನುಭವ ಕಥನದ ಹಿನ್ನೆಲೆಯಲ್ಲಿ ವಿವರಿಸಿರಿ.

**ಅಥವಾ**

ನ್ಯಾಯಮೂರ್ತಿ ಕೆ. ಎಸ್. ಹೆಗ್ಡೆಯವರ ಜೀವನದಿಂದ ನೀವು ಕಲಿಯುವ ಜೀವನ ಮೌಲ್ಯಗಳಾವುವು ?

II. ಕೆಳಗಿನ ಮೂರು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : **(3×5=15)**

1) ಕನ್ನಡದ ಕುರಿತಾಗಿ ಕವಿರಾಜಮಾರ್ಗಕಾರನ ಅಭಿಪ್ರಾಯಗಳನ್ನು ವಿಶ್ಲೇಷಿಸಿರಿ.

**ಅಥವಾ**

ಮುತ್ತೈದಿ ಸಾವು ಬಯಸುವ ಪತ್ನಿಗೆ ಕವಿಯು ನೀಡಿದ ಉಪದೇಶವೇನು ?

2) 'ಆನೆಯ ರಂಗನ ಹುಂಡಿ'ಯ ಹಿಂದಿನ ಕಥೆಯನ್ನು ವಿವರಿಸಿರಿ.

**ಅಥವಾ**

ದೇವುಡು ಅವರ ಲೇಖನದ ಹಿನ್ನೆಲೆಯಲ್ಲಿ 'ಸಂಸ್ಕೃತಿ' ಎಂದರೇನು ? ವಿವರಿಸಿರಿ.

3) ಪೋಂಜಿ ಸ್ಕೀಂ ತಂತ್ರಗಳು ಗ್ರಾಹಕರಿಗೆ ನೀಡುವ ಆಮಿಷಗಳೇನು ?

**ಅಥವಾ**

ಲೆಮಿನಾ ಕೈಗಾರಿಕಾ ಸಂಸ್ಥೆಗಳು ಭರವಸೆಯ ಬೃಹತ್ ಉದ್ದಿಮೆಗಳಾಗಿ ರೂಪುಗೊಳ್ಳಲು ಕಾರಣವೇನು ?

P.T.O.

III. ಕೆಳಗಿನ ಒಂದು ಪದ್ಯದ ಸಂದರ್ಭ ಸೂಚಿಸಿ ಅರ್ಥ ಸ್ವಾರಸ್ಯವನ್ನು ಬರೆಯಿರಿ : (1×5=5)

ಮದಿವ್‌ಯಾದ ಮ್ಯಾಗೆ
ಯಿಳದು ಬರುವಾಗೆ
ಯಿಂಗಂದ್ಲು ಮಲ್ಲಿ
ನನ ಕಿವೀನಲ್ಲಿ,
''ತಾಯಿ ಪಾದಕೆ ನಾಕು ಊವು
ಆಕಿ ಬರಬೇಕು ಬನ್ನಿರೀ ನೀವೂ''

ಅಥವಾ

ಪದನಱಿದು ನುಡಿಯಲುಂ ನುಡಿ
ದುದನಱಿದಾರಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುಱಿತೋ
ದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್

IV. ಕೆಳಗಿನ ಎರಡು ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ : (2×4=8)

1) ಕೇಳಣ್ಣ, ನಾನೊಬ್ಬ ಹಳೆಯ ಮುತ್ತೈದೆ
2) ಎಳ್‌ಡು ಮೈನಾಗ್ ಒಂದೆ ಉಸಿರು ಸಂಚಾರ
3) ಕೆಂಡದ ಬಳಿ ಇದ್ದು ಕೂಡ ಈ ಇದ್ದಲು ಇತ್ತು ಹಾಗೆ
4) ಯಾರನ್ನು ಕೇಳುವುದು, ಆಹಾ ಅರ್ಚಕರು

V. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ : (1×8=8)

1) 'ಕವಿರಾಜಮಾರ್ಗ' ಗ್ರಂಥದ ಕರ್ತೃ ಯಾರು ?
2) 'ಅಶ್ವತ್ಥಾಮನ್' ಯಾರ ನಾಟಕ ?
3) ಜಿ. ಪಿ. ರಾಜರತ್ನಂ ಇವರ ಪೂರ್ಣ ಹೆಸರೇನು ?
4) ಕೆ. ವಿ. ಸುಬ್ಬಣ್ಣನವರು ಸ್ಥಾಪಿಸಿದ ನಾಟಕ ಸಂಘ ಯಾವುದು ?
5) ನವ್ಯಕಾವ್ಯದ ಪ್ರವರ್ತಕರು ಯಾರು ?
6) ಮಾಸ್ತಿಯವರಿಗೆ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಕೃತಿ ಯಾವುದು ?
7) 'ಕಾಸುಕುಡಿಕೆ' ಯಾರ ಅಂಕಣ ಬರಹಗಳ ಕೃತಿ ?
8) ಕೆ. ಎಸ್. ಹೆಗ್ಡೆಯವರ ತಂದೆ ಯಾರು ?

Reg. No.

**BCAKALN 102**

# I Semester B.C.A. Degree Examination, February/March 2023
## (NEP 2020) (2022 – 2023 Batch Onwards)
## KANNADA (AECC)

Time : 2 Hours Max. Marks : 60

I. ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(3×8=24)**

1) ಕರ್ನಾಟಕದ ಸಾಂಸ್ಕೃತಿಕ ವಿವರಗಳು 'ಕನ್ನಡಿಗರ ತಾಯಿ' ಕವನದಲ್ಲಿ ಹೇಗೆ ವ್ಯಕ್ತವಾಗಿದೆ ?

**ಅಥವಾ**

'ಖಗ್ರಾಸ ಗ್ರಹಣೋಪಖ್ಯಾನ' ಕವನದ ಆಶಯವನ್ನು ಬರೆಯಿರಿ.

2) ಮೂಢ ನಂಬಿಕೆಗಳಿಗೆ ಬಲಿ ಬೀಳದೆ ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳಬೇಕೆಂಬ ಆಶಯವನ್ನು 'ನವಗ್ರಹ ಪರಿಕಲ್ಪನೆ' ಪ್ರಬಂಧದ ಹಿನ್ನೆಲೆಯಿಂದ ವಿವರಿಸಿರಿ.

**ಅಥವಾ**

ಸ್ವಾನುಭವದ ನೆಲೆಯ ವಿವರವನ್ನು 'ಮುಗಿಲುಗಳು' ಪ್ರಬಂಧದಲ್ಲಿ ಅಭಿವ್ಯಕ್ತಗೊಂಡ ಬಗೆಯನ್ನು ವಿವರಿಸಿರಿ.

3) ಅನ್ಯಾಯ ಅಸಮಾನತೆಗಳು ನಿರಂತರವಾಗಿವೆಯೆಂಬ ಕಹಿ ಸತ್ಯವು 'ಅಮಾಸ' ಕತೆಯಲ್ಲಿ ಪ್ರಕಟಗೊಂಡ ಬಗೆಯನ್ನು ವಿವರಿಸಿರಿ.

**ಅಥವಾ**

ಪ್ರಮುಖ ಸಾಮಾಜಿಕ ಜಾಲತಾಣಗಳನ್ನು ಪರಿಚಯಿಸಿ.

II. ಮೂರು ಪ್ರಶ್ನೆಗಳಿಗೆ ಉತ್ತರಿಸಿ : **(3×5=15)**

1) ನಿಸರ್ಗವನ್ನು ದೇವರ ಸಮವಾಗಿ ಭಾವಿಸಿದ ರೀತಿ 'ದೇವರು ರುಜು ಮಾಡಿದನು' ಕವನದಲ್ಲಿ ಹೇಗೆ ಕಾಣಬಹುದು ?

**ಅಥವಾ**

'ಹುಚ್ಚು ಕೋಡಿ ಮನಸು' ಕವನದ ಆಶಯವನ್ನು ಬರೆಯಿರಿ.

P.T.O.

2) ಹವಿಹರೆಯದವರನ್ನು ಕುರಿತ ಮಾತುಗಳನ್ನು ಬರೆಯಿರಿ.

**ಅಥವಾ**

ಒಂದು ಮಾಣಿಯ ಪರಿಣಯ ಪ್ರಸಂಗದ ಆಶಯವನ್ನು ಬರೆಯಿರಿ.

3) ನವ ಮಾಧ್ಯಮಗಳು ಯಾವುವು ? ವಿವರಿಸಿರಿ.

**ಅಥವಾ**

ಬಾಹ್ಯಾಕಾಶದಲ್ಲಿ ಅಂತರ್ಜಾಲ ಸಂಪರ್ಕವನ್ನು ಒದಗಿಸುವುದು ಹೇಗೆ ? ವಿವರಿಸಿ.

III. ಈ ಕೆಳಗಿನವುಗಳಲ್ಲಿ ಒಂದು ಪದ್ಯದ ಸಂದರ್ಭ ಮತ್ತು ಭಾವಾರ್ಥ ಸ್ವಾರಸ್ಯವನ್ನು ಬರೆಯಿರಿ : **(1×5=5)**

1) ನರಕಕ್ ಇಳ್ಸಿ ನಾಲ್ಗೆ ಸೀಳ್ಸಿ
ಬಾಯ್ ಒಲಿಸಾಕಿದ್ರೂನೆ
ಮೂಗ್ನಲ್ ಕನ್ನಡ್ ಪದವಾಡ್ತೀನಿ
ನನ್ ಮನಸನ್ ನೀ ಕಾಣೆ.

2) ಸೃಷ್ಟಿಯ ರಚನೆಯ ಕುಶಲಕೆ ಚಂದಕೆ
ಜಗದಚ್ಚರಿಯಂದದ ಒಪ್ಪಂದಕೆ
ಚಿರಚೇತನ ತಾನಿಹೆನೆಂಬಂದದಿ
ಬೆಳ್ಳಕ್ಕಿಯ ಹಂತಿಯ ಆ ನೆವದಿ
ದೇವರು ರುಜು ಮಾಡಿದನು
ರಸವಶನಾಗುತ ಕವಿ ಅದ ನೋಡಿದನು.

IV. ಎರಡು ವಾಕ್ಯಗಳ ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ : **(2×4=8)**

1) ನಿನ್ನ ಮೂರ್ತಿ ಜಗತ್ಕೀರ್ತಿ ಎಂದಿಗೆಮಗೆ ತೋರುವೆ.

2) ಪರ್ಪಂಚ್ ಇರೋತನಕ ಮುಂದೆ ಕನ್ನಡ್ ಪದಗೊಳ್ ನುಗ್ಲಿ.

3) ನಂದನದ ಪುಷ್ಪೋದ್ಯಾನದಲಿ ನಾಗ ಸಂಚಾರವಿರಬಹುದು.

4) ಕೊನೆಗೂ ಬಂದೇ ಬಿಟ್ಟಿತು ಆ ಪರ್ವದಿನ.

V. ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ : **(8×1=8)**

1) ಎಂ. ಗೋವಿಂದ ಪೈ ಎಲ್ಲಿಯವರು ?

2) 'ರತ್ನನ ಪದಗಳು' ಕವನ ಸಂಕಲನದ ಕವಿ ಯಾರು ?

3) 'ಹುಚ್ಚು ಕೋಡಿ ಮನಸ್ಸು' ಯಾರ ಕವಿತೆ ?

4) 'ಕನ್ನಡದ ಚೆಲುವು' ಲೇಖನವನ್ನು ಬರೆದವರು ಯಾರು ?

5) ಲಂಕೇಶ್‌ರವರು ಆರಂಭಿಸಿದ ಪತ್ರಿಕೆ ಯಾವುದು ?

6) 'ತಾಯಿಕೊಟ್ಟ ವರ' ಪ್ರಬಂಧದ ಲೇಖಕ ಯಾರು ?

7) ಅಮಾಸನ ಜೊತೆಗಿದ್ದ ಮುದುಕನ ಹೆಸರೇನು ?

8) ಇಂಟರ್‌ನೆಟ್ ಎಂಬ ಪದವನ್ನು ಮೊದಲಿಗೆ ಯಾವ ಇಸವಿಯಲ್ಲಿ ಬಳಸಲಾಗಿದೆ ?

Reg. No. | | | | | | | | | |

**BSCKALN 102**

# First Semester B.Sc. Examination, February/March 2023
# (NEP 2020) (2022-23 Batch Onwards)
# KANNADA (AECC)

Time : 2 Hours

Max. Marks : 60

I. ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(3×8=24)**

1) ಪಂಪನ ಬನವಾಸಿಯ ವರ್ಣನೆಯನ್ನು ವಿವರಿಸಿ.

**ಅಥವಾ**

'ಮಂಕುತಿಮ್ಮನ ಕಗ್ಗ' – ಇದರ ತಾತ್ತ್ವಿಕ ಧೋರಣೆಯೇನು ?

2) ಮಾನವೀಯ ಸಂಬಂಧಗಳ ಮೌಲ್ಯ 'ಬೆಟ್ಟದ ಜೀವ' ಕಾದಂಬರಿಯಲ್ಲಿ ಹೇಗೆ ಪ್ರಕಟವಾಗಿದೆ ?

**ಅಥವಾ**

ಭಾಷಾ ವೈವಿಧ್ಯತೆಯನ್ನು ಮಾಸ್ತಿಯವರು ಹೇಗೆ ಚಿತ್ರಿಸಿದ್ದಾರೆ ವಿವರಿಸಿ.

3) 'ನೆನಪುಗಳು ನೋಯಲಿಲ್ಲ' ಕಥೆಯ ಆಶಯ, ಧೋರಣೆಯೇನು ? ವಿವರಿಸಿ.

**ಅಥವಾ**

'ತಂದೆಯವರ ಸಹಾಯ' ಕಥೆಯ ತಾತ್ತ್ವಿಕತೆಯೇನು ? ವಿವರಿಸಿ.

II. ಮೂರು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : **(3×5=15)**

1) 'ಮಳೆ ಬರುವ ಹಾಗಿದೆ' – ಕವಿತೆಯ ಆಶಯವೇನು ?

**ಅಥವಾ**

ಕನ್ನಡ ನಾಡಿನ ಸಾಂಸ್ಕೃತಿಕ ಹಿರಿಮೆಯನ್ನು ನಂಜುಂಡ ಕವಿ ಹೇಗೆ ಚಿತ್ರಿಸಿದ್ದಾನೆ ?

2) ಪ್ರಕೃತಿಯೊಂದಿಗಿನ ಮಾನವ ಬದುಕಿನ ಸಂಘರ್ಷವನ್ನು ಲಾರಾಳ ಪಾತ್ರದ ಮೂಲಕ ವಿಶ್ಲೇಷಿಸಿ.

**ಅಥವಾ**

ಡಾರ್ವಿನ್ನನ ಸಂಶೋಧನೆಯ ದಾರಿಯನ್ನು ವಿವರಿಸಿ.

3) ಸ್ವಾಮಿನಾಥನ್ ಪಾತ್ರವನ್ನು ಪರಿಚಯಿಸಿ.

**ಅಥವಾ**

'ತಾಮ್ರವರ್ಣದ ತಾಯಿ' ಕವಿತೆಯ ಆಶಯವನ್ನು ಬರೆಯಿರಿ.

P.T.O.

III. ಒಂದರ ಭಾವಾರ್ಥವನ್ನು ವಿವರಿಸಿ : (1×5=5)

1) ಸುತ್ತಿರಿದ ರಸದ ತೊರೆಗಳೆ
ಮುತ್ತಿನ ಮಾಣಿಕದ ಪಲವುಮಾಗರಮೆ ಮದೋ
ನ್ಮತ್ತ ಮದಕರಿ ವನಂಗಳೆ
ಸುತ್ತಲುಮಾ ನಾಡ ಸಿರಿಯನೇನಂ ಪೊಗಳ್ವೆಂ

ಅಥವಾ

2) ಮೂಡಣ ಕಣಿವೆಯ ತಳದೊಳಗಾಲಿಸು
ಎಚ್ಚೆತ್ತಿದೆ ಮೌನ !
ಸಾಸಿರ ದನಿಯೊಳು ಚಿಗುರಿಗೆ ಮೌನ ,
ಸುಮ್ಮಾನದಿ ನುಡಿವೆತ್ತಿದೆ ಮೌನ !
ಸುಂದರವೀ ಮೌನ !
ಸವಿ ಮೌನ !

IV. ಎರಡರ ಸಂದರ್ಭ ಸ್ವಾರಸ್ಯ ತಿಳಿಸಿ : (2×4=8)

1) ಅಹುದು ಮಳೆ ಬೀಳಬೇಕು, ಮುಚ್ಚಿದ್ದ ಮನಸುಗಳ ಮೇಲೆ.
2) ದೇಗುಲದೊಳು ಮುಂಜಾನೆಯೊಳಾಲಿಸು ಚಿತ್ ಆಗಿದೆ ಮೌನ !
3) ನಾಡೊಳು ದಾರಿ ಸಮೆಯದು ಪಾಂಥರಿಗೆ.
4) ಧರೆಯ ಬದುಕೇನದರ ಗುರಿಯೇನು ಫಲವೇನು ?

V. ನೇರವಾಗಿ ಉತ್ತರಿಸಿ : (8×1=8)

1) 'ಆದಿಪುರಾಣ' ವನ್ನು ರಚಿಸಿದವರು ಯಾರು ?
2) 'ರಾಮನಾಥ ಚರಿತೆ' – ಈ ಕಾವ್ಯವನ್ನು ಬರೆದವರು ಯಾರು ?
3) ಎಚ್. ಎಸ್. ಶಿವಪ್ರಕಾಶ್ ರವರ ಹುಟ್ಟೂರು ಯಾವುದು ?
4) 'ಸಣ್ಣ ಕತೆಗಳ ಜನಕ' – ಎಂಬ ಬಿರುದು ಯಾರಿಗಿದೆ ?
5) ಬಿ. ಪಿ. ರಾಧಾಕೃಷ್ಣರವರ ಪೂರ್ಣ ಹೆಸರೇನು ?
6) 'ಪಂಚತಂತ್ರದ ಕತೆ'ಯ ಕರ್ತೃ ಯಾರು ?
7) ನೆನಪುಗಳು ನೋಯಲಿಲ್ಲ… ಈ ಕತೆಯನ್ನು ಬರೆದವರು ಯಾರು ?
8) 'ತಾಮ್ರ ವರ್ಣದ ತಾಯಿ' – ಈ ಕವಿತೆಯ ಕರ್ತೃ ಯಾರು ?

Reg. No. [ | | | | | | | | ]

# BASKALN 102/HRDKALN 102/BSWKALN 102/ BVAKALN 102

**I Semester B.A./B.A. (HRD)/B.S.W./B.V.A. Examination, February/March 2023**
**(NEP 2020) (2022 – 23 Batch Onwards)**
**KANNADA (AECC)**
**Kannada Language**

Time : 2 Hours  Max. Marks : 60

I. ಕೆಳಗಿನ ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿರಿ. **(3×8=24)**

1) 'ಕನ್ನಡ ನಾಡಿನ ಹಾಡು' ಕವನದಲ್ಲಿ ಚಿತ್ರಿತವಾಗಿರುವ ನಾಡು-ನುಡಿ ಅಭಿಮಾನವನ್ನು ನಿರೂಪಿಸಿರಿ.

**ಅಥವಾ**

ದ.ರಾ. ಬೇಂದ್ರೆಯವರು ಸೂರ್ಯೋದಯದ ಸೊಬಗನ್ನು ಚಿತ್ರಿಸಿದ ಬಗೆಯನ್ನು ವಿವರಿಸಿರಿ.

2) ಅಂದಂದಿನ ಯುಗಧರ್ಮದೊಂದಿಗೆ ಕನ್ನಡ ಸಾಹಿತ್ಯ ಬೆಳೆದು ಬಂದ ಬಗೆಯನ್ನು ವಿವರಿಸಿರಿ.

**ಅಥವಾ**

ಸಿದ್ಧಲಿಂಗಯ್ಯನವರ ಮನಸ್ಸಿನ ಮೇಲೆ ಪ್ರಭಾವಬೀರಿದ ಕೆಲವು ಬಾಲ್ಯದ ಘಟನೆಗಳನ್ನು ಚಿತ್ರಿಸಿರಿ.

3) ಪರಸ್ಪರ ಸಹಬಾಳ್ವೆಯ ಅವಶ್ಯಕತೆಯನ್ನು ದೇವರ ಮನೆಯವರು ಹೇಗೆ ನಿರೂಪಿಸಿದ್ದಾರೆ ? ವಿವರಿಸಿರಿ.

**ಅಥವಾ**

ಚಿತ್ರಲೇಖನ ಮತ್ತು ಪ್ರಬಂಧ ರಚನೆಗಳ ಕುರಿತು ಮಾಹಿತಿ ನೀಡಿರಿ.

II. ಕೆಳಗಿನ ಮೂರು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **(3×5=15)**

1) ಪಾರಿಜಾತದ ಧ್ಯಾನಸ್ಥ ಸ್ಥಿತಿಯನ್ನು ಕವಿ ಹೇಗೆ ವರ್ಣಿಸಿದ್ದಾರೆ ? ವಿವರಿಸಿರಿ.

**ಅಥವಾ**

ಜಿ. ಎಸ್. ಶಿವರುದ್ರಪ್ಪನವರ ಬಾಲ್ಯದ ನೆನಪುಗಳು ಕವನದಲ್ಲಿ ಮೂಡಿಬಂದ ಬಗೆಯನ್ನು ವಿವರಿಸಿರಿ.

2) ಪಂಜೆಯವರ ಜೀವನದ ಗತಿ ಮತ್ತು ಅವರು ಶಿಶು ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ವಿವರಿಸಿರಿ.

**ಅಥವಾ**

ಸಾರಾ ಅಬೂಬಕ್ಕರ್‌ರವರ ಬಾಲ್ಯದ ಹೆಜ್ಜೆ ಹಾದಿಯನ್ನು ಚಿತ್ರಿಸಿರಿ.

**P.T.O.**

3) ಹುಲಿ-ದನ ಆಟದ ವೈಶಿಷ್ಟ್ಯವೇನು ? ಅದರ ಸಾಂಕೇತಿಕ ಆಯಾಮಗಳೇನು ? ವಿವರಿಸಿರಿ.

**ಅಥವಾ**

ಮನೋವಿಜ್ಞಾನದ ಹಾಡು – ಲೇಖನದ ಆಶಯವೇನು ? ವಿವರಿಸಿರಿ.

III. **ಒಂದು** ಪದ್ಯದ ಸಂದರ್ಭಸೂಚಿಸಿ, ಭಾವವನ್ನು ವಿವರಿಸಿರಿ. **(1×5=5)**

1) ಕಿವಿಗಳಿಗಿಂಪನು ಮಾಡುವವು
ಕಣ್ಣಿಗೆ ಹಬ್ಬವ ನೀಡುವವು
ನಾಡಿನ ಸಿರಿ ಕೊಂಡಾಡುವವು
ಹಾಡುತಲೀ ಸೊಬಗಿನ ಹಾಡು
ನನ್ನದು ಈ ಕನ್ನಡ ನಾಡು

**ಅಥವಾ**

2) ನೆಲದಾಗ ಗಿಡ ಚಲುವ, ಮಾವೀನ ಗಿಡ ಚಲುವ
ಹಕ್ಕಿಪಕ್ಕ್ಯಾಗ ಗಿಣಿ ಚಲುವ, ಮ್ಯಾಲಿನ
ಚಿಕ್ಕ್ಯಾಗ ಚಲುವ ಚಂದ್ರಾಮ

IV. ಯಾವುದಾದರೂ **ಎರಡು** ವಾಕ್ಯಗಳನ್ನು ಸಂದರ್ಭಸಹಿತ ವಿವರಿಸಿರಿ. **(2×4=8)**

1) ಭಾರತದ ಗುರುಕುಲವು ನೋಡು.
2) ಎಲ್ಲಿಂದ ಬಂದಿರ್ತೋ ಅಲ್ಲಿಗೇ ಈ ನೋಟ.
3) ಮೂಡಲದ ಕೆಂಪಿನೊಳು ಹಾಡಿದವು ಹಕ್ಕಿಗಳು.
4) ಇದು ಬರಿ ಬೆಳಗಲ್ಲೋ ಅಣ್ಣಾ.

V. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದ ಉತ್ತರ ಬರೆಯಿರಿ. **(1×8=8)**

1) ಆನಂದ ಕಂದ – ಇದು ಯಾರ ಕಾವ್ಯನಾಮ ?
2) ತ್ರಿಭಂಗಿ ನಿಲುವಲ್ಲಿ ಧ್ಯಾನಸ್ಥರಾದವರು ಯಾರು ?
3) ಕನ್ನಡದ ಠಾಗೋರ್ ಬಿರುದಾಂಕಿತ ಕನ್ನಡದ ವರ ಕವಿ ಯಾರು ?
4) ಪಂಜೆಯವರ ಸಾಹಿತ್ಯ ಜೀವನ ಯಾವ ಪತ್ರಿಕೆಯಿಂದ ಆರಂಭವಾಯಿತು ?
5) ಯಾವ ಪತ್ರಿಕೆಯು ಸಾರಾ ಅಬೂಬಕ್ಕರ್‌ರವರ ಸಾಹಿತ್ಯ ಪ್ರಕಟಣೆಗೆ ಸುಗಮ ಹಾದಿಯನ್ನು ತೋರಿಸಿತು ?
6) ಸಿದ್ಧಲಿಂಗಯ್ಯನವರ ಸಂಶೋಧನಾ ಮಹಾ ಪ್ರಬಂಧ ಯಾವುದು ?
7) 'ಮನೋವಿಜ್ಞಾನದ ಹಾಡು' ಲೇಖನವನ್ನು ಯಾವ ಕೃತಿಯಿಂದ ಆಯ್ದುಕೊಳ್ಳಲಾಗಿದೆ ?
8) 'ಸ್ವಲ್ಪ ಮಾತಾಡಿ ಪ್ಲೀಸ್' ಕೃತಿಯಿಂದ ಪಠ್ಯಕ್ಕೆ ಆರಿಸಿಕೊಂಡಿರುವ ಲೇಖನ ಯಾವುದು ?

---

Reg. No. | | | | | | | | | |

**BBAKALN 102**

# I Semester B.B.A. Examination, February/March 2023
## (NEP 2020) (2022 – 23 Batch Onwards)
## (AECC)
## KANNADA LANGUAGE

Time : 2 Hours Max. Marks : 60

I. ಕೆಳಗಿನ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ. **(3×8=24)**

1) ಕನ್ನಡ ನಾಡಿನಲ್ಲಿ ಜನ್ಮವೆತ್ತಿದ್ದಕ್ಕೆ ಧನ್ಯತೆಯ ಭಾವವನ್ನು ಕವಿ 'ಮಂಗಲ ಗೀತೆ' ಕವನದಲ್ಲಿ ಹೇಗೆ ಅಭಿವ್ಯಕ್ತಿಸಿದ್ದಾರೆ ? ವಿವರಿಸಿರಿ.

**ಅಥವಾ**

ಬದುಕು ಮತ್ತು ಸಾವು ಎರಡರ ನಡುವಣ ಜಂಜಾಟವನ್ನು ಕವಿ ಚಿತ್ರಿಸಿರುವ ಬಗೆಯನ್ನು ವಿವರಿಸಿರಿ.

2) 'ಗೇಣಿದಾರರ ಏಣಿಯಾಟ' ಲೇಖನ ಕರಾವಳಿಯಲ್ಲಿ ತಂದ ಬದಲಾವಣೆಯನ್ನು ವಿವರಿಸಿರಿ.

**ಅಥವಾ**

ಬಡತನ ಹಾಗೂ ದುರ್ಬಲತೆ ಹೆಣ್ಣಿನ ಮೇಲಿನ ಶೋಷಣೆಗೆ ಹೇಗೆ ಕಾರಣವಾಗುತ್ತದೆ ?

3) ಸಾಧನೆಗೆ ಸೃಜನಶೀಲತೆಯೊಂದಿದ್ದರೆ ಸಾಕು, ಶ್ರೀಮಂತಿಕೆ ಬೇಕಾಗಿಲ್ಲ ಎಂಬುದನ್ನು ಅಬ್ದುಲ್ ಕಲಾಂರವರು ವಿವರಿಸಿದ ಬಗೆಯನ್ನು ತಿಳಿಸಿ.

**ಅಥವಾ**

'ಇತಿಹಾಸ ಎಂಬ ಗುರು' ಲೇಖನ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಹೇಗೆ ಸಹಾಯಕಾರಿ ?

II. ಕೆಳಗಿನ **ಮೂರು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **(3×5=15)**

1) 'ಪೆಣ್ಣ ಪೆತ್ತುದರಿಂದ ಪೆಸರೆನಿಸಿತು' ಕಾವ್ಯದಲ್ಲಿ ಹೆಣ್ಣಿನ ಕುರಿತು ಹೊನ್ನಮ್ಮನ ನಿಲುವೇನು ? ವಿಶ್ಲೇಷಿಸಿ.

**ಅಥವಾ**

ಕೌಟುಂಬಿಕ ಮೌಲ್ಯಗಳು ಜನಪದ ತ್ರಿಪದಿಗಳಲ್ಲಿ ಅಭಿವ್ಯಕ್ತಗೊಂಡಿರುವ ಬಗೆಯನ್ನು ವಿವರಿಸಿ.

2) ಹೆದ್ದಾರಿಗಳನ್ನು ನಿಸರ್ಗ ಲೂಟಿಯ ಹೆದ್ದಾರಿಗಳೆಂದು ಏಕೆ ಕರೆಯಬೇಕಾಗುತ್ತದೆ ?

**ಅಥವಾ**

ಕುಟುಂಬದೊಳಗಿನ ಸಂಬಂಧಗಳ ಏರಿಳಿತವನ್ನು 'ಮೊಸರಿನ ಮಂಗಮ್ಮ' ಕತೆಯಲ್ಲಿ ಮಾಸ್ತಿಯವರು ವ್ಯಕ್ತಪಡಿಸಿದ ಬಗೆಯನ್ನು ವಿವರಿಸಿರಿ.

3) 'ಪ್ರೇಮವು ಮನಸ್ಸನ್ನು ಕರಗಿಸಿ ಶಾಶ್ವತ ಬದಲಾವಣೆಯನ್ನು ತರುತ್ತದೆ' – ಕರ್ಜಗಿಯವರ ಲೇಖನದ ಆಧಾರದಿಂದ ವಿವರಿಸಿರಿ.

**ಅಥವಾ**

ರೈತರು ಕಾಳಿದಾಸನನ್ನು ಭೇಟಿಯಾದ ಉದ್ದೇಶವೇನು ? ವಿವರಿಸಿರಿ.

III. ಕೆಳಗಿನ **ಒಂದು** ಪದ್ಯಭಾಗದ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿವರಿಸಿರಿ. **(1×5=5)**

ಬಡವರ ಒಡಲಿನ ಬಡಬ್ಯಾನಲದಲ್ಲಿ
ಸುಡು ಸುಡು ಪಂಜು ಕೈಯೊಳಗಿತ್ತೋ
ಕಂಬನಿ ಕುಡಿಯುವ ಹುಂಬ ಬಾಯಿಲೆ ಮೈ-
ದುಂಬಿಯಂತುಧೋ ಉಧೋ ಎನ್ನುತ್ತಲಿತ್ತೋ

**ಅಥವಾ**

ಹಾರೆಗುದ್ದಲಿ ಕೊಡಲಿ ನೊಗನೇಗಿಲೆತ್ತುತಲಿ
ನೆಲದಿಂದ ಹೊಲದಿಂದ ಹೊರಟು ಬನ್ನಿ!
ಕನ್ನಡದ ನಾಡಿಂದ ಕಾಡಿಂದ ಗೂಡಿಂದ
ಕಡಲಿಂದ ಸಿಡಿಲಿಂದ ಗುಡುಗಿ ಬನ್ನಿ!

IV. ಕೆಳಗಿನ ಎರಡು ಸಾಲುಗಳ ಸಂದರ್ಭ ಸೂಚಿಸಿ ಅರ್ಥ ವಿಶೇಷತೆಗಳನ್ನು ವಿವರಿಸಿರಿ. **(2×4=8)**

1) ಭಾರತವೇ ಸಾವಿತ್ರಿ ಕನ್ನಡವೇ ಗಾಯತ್ರಿ.

2) ಬಸಂತಂಗೆ ನೆಲೆವೀಡಾಗಿರ್ದುದು.

3) ಕೆರೆಯ ನೀರನು ಕೆರೆಗೆ ಚೆಲ್ಲಿ.

4) ಪೆಣ್ಣಪೆತ್ತವರ ಬಳಗ ಬಳೆವುದು ಬೇಗ.

V. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ. **(8×1=8)**

1) 'ಬೆಟ್ಟಸಾಲು ಮಳೆ' ಕಾದಂಬರಿಯ ಕರ್ತೃ

2) 'ಕಬ್ಬಿಗರ ಕಾವ' ಯಾರ ಕೃತಿ ?

3) 'ಮೈಸೂರು ಮಲ್ಲಿಗೆ' ಎಂಬ ಕವನ ಸಂಕಲನದಿಂದಲೇ ಗುರುತಿಸಿಕೊಳ್ಳುವ ಕವಿ

4) ಬೇಂದ್ರೆಯವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿದೆ ?

5) ಮಾಸ್ತಿ ವೆಂಕಟೇಶ ಅಯ್ಯಂಗಾರರ ಕಾವ್ಯನಾಮವೇನು ?

6) ಸಂಚಿಯ ಹೊನ್ನಮ್ಮ ಯಾರಿಂದ ವಿದ್ಯಾರ್ಜನೆ ಹೊಂದಿದಳು ?

7) ಅಬ್ದುಲ್ ಕಲಾಂರವರ ಆತ್ಮ ಕಥನದ ಹೆಸರೇನು ?

8) 'ಬಕುಲದ ಹೂಗಳು' ಇದು ಯಾರ ಕವನ ಸಂಕಲನ ?

---

Reg. No. [ ]

**BBAKALN 101**

# I Semester B.B.A. Degree Examination, February/March 2023
## (N.E.P. 2020) (2021 – 22 Batch)
## KANNADA (AECC)
## Kannada Language

Time : 2 Hours Max. Marks : 60

I. ಕೆಳಗಿನ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ : **(3×8=24)**

1) ಭೀಷ್ಮನು ಪ್ರತಿಜ್ಞಾಬದ್ಧನಾದ ಸಂದರ್ಭವನ್ನು 'ಕುಲಮುಂ ತರ್ಕ್ಕೊರ್ಮೆಯುಂ ಮಾಸದೇ ?' ಕಾವ್ಯಭಾಗದ ಹಿನ್ನೆಲೆಯೊಂದಿಗೆ ವಿವರಿಸಿ.

**ಅಥವಾ**

ಬಸವಣ್ಣನ ವಚನಗಳಲ್ಲಿ ಪ್ರಕಟಗೊಂಡ ಭಕ್ತಿಯ ಸ್ವರೂಪವನ್ನು ವಿವರಿಸಿ.

2) 'ಮೇಷ್ಟ್ರು ಕಂಡ ಅವಾಂತರಗಳು' ಪ್ರಬಂಧದಲ್ಲಿ ಬರುವ ಸ್ವಾರಸ್ಯಕರ ಸಂಗತಿಗಳನ್ನು ವಿವರಿಸಿ.

**ಅಥವಾ**

ಅಫ್ಘನ್ನಿನ ಹುಡುಗಿ ಫರಾಳ ಯಶೋಗಾಥೆಯನ್ನು ವಿವರಿಸಿ.

3) ಬುದ್ಧ ಮತ್ತು ಯಶೋಧರೆಯ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.

**ಅಥವಾ**

ಬುದ್ಧನೊಳಗಿನ ಶಾಂತಿ ಅವನೊಂದಿಗಿನ ಇತರರಲ್ಲಿ ಪ್ರತಿಫಲಿಸುವ ಬಗೆಯನ್ನು ನಾಟಕದ ಹಿನ್ನೆಲೆಯಲ್ಲಿ ವಿವರಿಸಿ.

II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ : **(3×5=15)**

1) ಕೃಷ್ಣನು ರುಕ್ಮಿಣಿಯ ಗರ್ವಭಂಗ ಮಾಡಿದ ಸಂದರ್ಭವನ್ನು ಜನಪದ ಕಾವ್ಯದ ಹಿನ್ನೆಲೆಯಲ್ಲಿ ವಿವರಿಸಿರಿ.

**ಅಥವಾ**

'ಜೀತದಾಳಿನ ಗಾಥೆ' ಕವಿತೆಯ ಆಶಯವೇನು ? ವಿವರಿಸಿರಿ.

P.T.O.

2) ಮಿತ್ರ–ಮಾರ್ಗದರ್ಶಕ – ದಾರ್ಶನಿಕನಾಗಲು ಪುಸ್ತಕಗಳಿಂದ ಮಾತ್ರ ಸಾಧ್ಯ ಎಂಬುದನ್ನು 'ಯಾಕೆ ಓದಬೇಕು' ಲೇಖನದ ಮೂಲಕ ನಿರೂಪಿಸಿ.

**ಅಥವಾ**

'ಪಾತಾಳಗಂಗಾ – ಬರಿದಾಗಲಿರುವ ಅಂತರಗಂಗೆ' ಲೇಖನದ ಆಶಯವೇನು ?

3) ರಾಹುಲನ ಪಾತ್ರವನ್ನು ನಾಟಕದ ಹಿನ್ನೆಲೆಯಲ್ಲಿ ಪರಿಚಯಿಸಿ.

**ಅಥವಾ**

ಪತಿಯಿಂದ ಪರಿತ್ಯಕ್ತಳಾದ ಯಶೋಧರೆಯ ಅಂತರಾಳವು ನಾಟಕದಲ್ಲಿ ಹೇಗೆ ಅನಾವರಣಗೊಂಡಿದೆ ? ವಿವರಿಸಿ.

III. ಈ ಕೆಳಗಿನವುಗಳಲ್ಲಿ **ಒಂದು** ಪದ್ಯದ ಸಂದರ್ಭ ಸೂಚಿಸಿ, ಭಾವಾರ್ಥವನ್ನು ವಿವರಿಸಿ. **(1×5=5)**

ಒಡಲುಗೊಂಡವ ಹಸಿವ
ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದು ನೀನೆನ್ನ ಜಡಿದೊಮ್ಮೆ –
ನುಡಿಯದಿರಾ !
ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ
ರಾಮನಾಥಾ

**ಅಥವಾ**

ನೂರು ಕೊಡ ಹೊತ್ತರೂ
ಬೆನ್ನು ಬಾಗುವುದಿಲ್ಲ
ಬಾವಿಯೊಳಗಿನ ಬತ್ತದ ಜಲ
ನನ್ನ ಛಲ; ನೋಡು
ನಾ ಬಸಿದ ಬೆವರು ಹನಿಗಳಲ್ಲಿ
ನಿನ್ನ ಮನೆ ಮಂದಿ ಮೈತೊಳೆದು
ಶುಭ್ರವಾಗುತ್ತಾರೆ.

IV. ಕೆಳಗಿನ **ಎರಡು** ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ : **(2×4=8)**

1) ಬೇಡುವೊಡೆ ನೀವೆನ್ನಯ್ಯನಂ ಬೇಡಿರೇ

2) ಇಂದು ಬಪ್ಪುದು ನಮಗೀಗಲೇ ಬರಲಿ

3) ಗಿಡಗಂಟೆಯಾ ಕೊರಳೊಳಗಿಂದ ಹಕ್ಕಿಗಳ ಹಾಡು

4) ಬಾಯ್ತೆರೆದ ಭೂಮಿಯೊಳಕ್ಕೆ ಎಲ್ಲ ಸೀತೆಯರ ಹಾಗೆ ಸರಿಯಬಾರದು.

V. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ : **(8×1=8)**

1) 'ಭಕ್ತಿ ಭಂಡಾರಿ' ಎಂದು ಯಾರನ್ನು ಕರೆಯುತ್ತಾರೆ ?

2) 'ಆದಿಕವಿ'ಯೆಂದು ಯಾರನ್ನು ಕರೆಯುತ್ತಾರೆ ?

3) ಎ.ಕೆ. ರಾಮಾನುಜನ್ ಅವರ ಮೊದಲ ಕವನ ಸಂಕಲನ ಯಾವುದು ?

4) 'ಶಬ್ದಗಳು' ಈ ಕಾದಂಬರಿಯ ಕರ್ತೃ ಯಾರು ?

5) ಸಂತೋಷ್ ಕುಮಾರ್ ಮೆಹಂದಳೆಯವರ ಹುಟ್ಟೂರು ಯಾವುದು ?

6) 'ಒಲಿದಂತೆ ಹಾಡುವೆ' ಇದು ಯಾರ ಅಂಕಣ ಬರಹ ?

7) ಸಿದ್ಧಾರ್ಥನ ಮಗನ ಹೆಸರೇನು ?

8) ಮಾಸ್ತಿಯವರಿಗಿರುವ ಬಿರುದು ಯಾವುದು ?

---